# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿ 3 ಕಮರ್ಷಿಯಲ್ ನ್ಯಾಯಾಲಯಗಳನ್ನು (3 Commercial Courts) ಸ್ಥಾಪಿಸುವ ಬಗ್ಗೆ.

* * *

**ಸರ್ಕಾರಿ ಆದೇಶ ಸಂಖ್ಯೆ: ಲಾ 35 ಎಲ್‌ಸಿಇ 2018,**

**ಬೆಂಗಳೂರು, ದಿನಾಂಕ: 11.09.2018.**

**ಓದಲಾಗಿದೆ:**

1. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ರವರ ಪತ್ರ ~~ಸಂಖ್ಯೆ~~ GOB.II.88/2016, ದಿನಾಂಕ: 21.03.2018 ಮತ್ತು 26.06.2018.
2. ಸರ್ಕಾರದ ಆದೇಶ ಸಂಖ್ಯೆ: ಲಾ 35 ಎಲ್‌ಸಿಇ 2018, ದಿನಾಂಕ: 31.07.2018.
3. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ರವರ ಪತ್ರ ಸಂಖ್ಯೆ: GOB.II.88/2016, ದಿನಾಂಕ: 01.08.2018.

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಪತ್ರಗಳಲ್ಲಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಲಾ 39 ಎಲ್‌ಸಿಇ 2016, ದಿನಾಂಕ: 21.09.2017, 08.11.2017 ಹಾಗೂ ದಿನಾಂಕ: 30.01.2018 ರಲ್ಲಿ ರಾಜ್ಯದಲ್ಲಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಗಳನ್ನು ಕಮರ್ಷಿಯಲ್ ಕೋರ್ಟ್ (Commercial Courts) ಗಳನ್ನಾಗಿ ನಿಗಧಿಗೊಳಿಸಿ ಆದೇಶಿಸಲಾಗಿದೆ. ದಿನಾಂಕ: 04.03.2018ರಂದು ನಡೆದ ಮಾನ್ಯ ಉಚ್ಚ ನ್ಯಾಯಾಲಯದ ಆಡಳಿತಾತ್ಮಕ ಸಮಿತಿ-1 ಯ ಸಭೆಯಲ್ಲಿ ಕಮರ್ಷಿಯಲ್ ಕೋರ್ಟ್ (Commercial Courts) ಗಳನ್ನು ನಿಗಧಿಗೊಳಿಸಿರುವ ಅಧಿಸೂಚನೆಯನ್ನು ಹಿಂಪಡೆದು, ಬೆಂಗಳೂರು ನಗರದಲ್ಲಿ 2 ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯಗಳನ್ನು ಹಾಗೂ ಬಳ್ಳಾರಿಯಲ್ಲಿ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಸೇರಿದಂತೆ ಒಟ್ಟು 3 ಕಮರ್ಷಿಯಲ್ ಕೋರ್ಟ್ (Commercial Courts) ಗಳನ್ನು ಸ್ಥಾಪಿಸಿ, ಸದರಿ ನ್ಯಾಯಾಲಯಗಳಿಗೆ ರಾಜ್ಯದಲ್ಲಿನ ಕಾರ್ಯವ್ಯಾಪ್ತಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ:-

| ಕ್ರ ಸಂ. | ನ್ಯಾಯಾಲಯದ ಹೆಸರು | ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳು |
|---|---|---|
| 1 | ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು | ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 2 | ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು | ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ – ಮಂಗಳೂರು, ಹಾಸನ, ಕೊಡಗು – ಮಡಿಕೇರಿ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು ಮತ್ತು ಉಡುಪಿ ಜಿಲ್ಲೆಗಳು. |
| 3 | ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಳ್ಳಾರಿ | ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಬೀದರ್, ದಾವಣಗೆರೆ, ಧಾರವಾಡ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ, ರಾಯಚೂರು, ಉತ್ತರ ಕನ್ನಡ – ಕಾರವಾರ, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಗಳು. |

ಪುಟ-2ಕ್ಕೆ
ಮುಂದುವರೆದಿದೆ.

2. ಪ್ರತಿ ನ್ಯಾಯಾಲಯಗಳಿಗೆ ಪ್ರಿಸೈಡಿಂಗ್ ಅಧಿಕಾರಿ ಹಾಗೂ ಈ ಕೆಳಕಂಡಂತೆ ಅಗತ್ಯ ಪೂರಕ ಸಿಬ್ಬಂದಿಗಳೊಂದಿಗೆ 3 ಕಮರ್ಷಿಯಲ್ ಕೋರ್ಟ್ (Commercial Courts) ಗಳನ್ನು ಸ್ಥಾಪಿಸಲು ರಿಜಿಸ್ಟ್ರಾರ್ ಜನರಲ್‌ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ;

| ಕ್ರ ಸಂ. | ಹುದ್ದೆಗಳ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 1 | ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು | 1 |
| 2 | ತೀರ್ಪು ಬರಹಗಾರರು | 2 |
| 3 | ಶಿರಸ್ತೇದಾರರು | 2 |
| 4 | ಪ್ರಥಮ ದರ್ಜೆ ಸಹಾಯಕರು | 2 |
| 5 | ದ್ವಿತೀಯ ದರ್ಜೆ ಸಹಾಯಕರು | 2 |
| 6 | ಬೆರಳಚ್ಚುಗಾರರು | 1 |
| 7 | ಅಟೆಂಡರ್ | 1 |
| 8 | ಪ್ಯೂನ್ | 2 |
| | ಒಟ್ಟು | 13 |

3. ಮೇಲೆ ಓದಲಾದ ಕ್ರಮ ಸಂಖ್ಯೆ: (2) ರ ಆದೇಶದಲ್ಲಿ, "Easy of Doing Business" ನ ಅನುಷ್ಠಾನಗೊಳಿಸುವಿಕೆಯ ಕುರಿತಾಗಿ "The Commercial Courts, Commercial Division and Commercial Appellate Division of High Courts Act, 2015" ರಡಿ ದಾಖಲಾಗುವ ಪ್ರಕರಣಗಳನ್ನು ನಿರ್ವಹಿಸಲು ಬೆಂಗಳೂರಿನಲ್ಲಿ ಎರಡು ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯಗಳನ್ನು ಮತ್ತು ಬಳ್ಳಾರಿಯಲ್ಲಿ ಒಂದು ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಸೇರಿ ಒಟ್ಟು ಮೂರು ವಾಣಿಜ್ಯಾತ್ಮಕ ನ್ಯಾಯಾಲಯಗಳನ್ನು (Commercial Courts) ಸ್ಥಾಪಿಸಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ.

4. ಮೇಲೆ ಓದಲಾದ ಕ್ರಮ ಸಂಖ್ಯೆ: (3) ರ ಪತ್ರದಲ್ಲಿ, ಬೆಂಗಳೂರಿನಲ್ಲಿ ಎರಡು ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯಗಳನ್ನು ಮತ್ತು ಬಳ್ಳಾರಿಯಲ್ಲಿ ಒಂದು ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಸೇರಿ ಒಟ್ಟು ಮೂರು ವಾಣಿಜ್ಯಾತ್ಮಕ ನ್ಯಾಯಾಲಯಗಳನ್ನು (Commercial Courts) ಸ್ಥಾಪಿಸಲು ಮಂಜೂರಾತಿ ನೀಡಿದ್ದು, ಸದರಿ ನ್ಯಾಯಾಲಯಗಳಿಗೆ ಅಗತ್ಯ ಪೂರಕ ಸಿಬ್ಬಂದಿ ಮಂಜೂರು ಮಾಡುವಂತೆ ಮತ್ತು ನ್ಯಾಯಾಲಯಗಳ ವೆಚ್ಚ ಭರಿಸುವ ಲೆಕ್ಕ ಶೀರ್ಷಿಕೆ ತಿಳಿಸುವಂತೆ ರಿಜಿಸ್ಟ್ರಾರ್ ಜನರಲ್‌ರವರು ಕೋರಿರುತ್ತಾರೆ.

- ಪುಟ-3ಕ್ಕೆ
ಮುಂದುವರೆದಿದೆ.

5. ಆ ಮೇರೆಗೆ ಸರ್ಕಾರವು ಕೂಲಂಕಷವಾಗಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, "Easy of Doing Business" ನ ಅನುಷ್ಠಾನಗೊಳಿಸುವಿಕೆಯ ಕುರಿತಾಗಿ "The Commercial Courts, Commercial Division and Commercial Appellate Division of High Courts Act, 2015" ರಡಿ ದಾಖಲಾಗುವ ಪ್ರಕರಣಗಳನ್ನು ನಿರ್ವಹಿಸಲು ಸರ್ಕಾರದ ಆದೇಶ ಸಂಖ್ಯೆ: ಲಾ 35 ಎಲ್‌ಸಿಇ 2018, ದಿನಾಂಕ: 31.07.2018ರ ಆದೇಶದಲ್ಲಿ ಬೆಂಗಳೂರಿನಲ್ಲಿ ಎರಡು ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯಗಳನ್ನು ಮತ್ತು ಬಳ್ಳಾರಿಯಲ್ಲಿ ಒಂದು ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಸೇರಿ ಒಟ್ಟು ಮೂರು ವಾಣಿಜ್ಯಾತ್ಮಕ ನ್ಯಾಯಾಲಯಗಳನ್ನು (Commercial Courts) ಸ್ಥಾಪಿಸಿದ್ದು, ಸದರಿ ನ್ಯಾಯಾಲಯಗಳಿಗೆ ಈ ಕೆಳಕಂಡಂತೆ ಒಟ್ಟು 24 ಹುದ್ದೆಗಳನ್ನು ಸೃಜಿಸಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ:-

| ಕ್ರ ಸಂ. | ಹುದ್ದೆಗಳ ಹೆಸರು | ಹೊಸದಾಗಿ ಸೃಜಿಸಿದ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| 1 | ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು | 1 | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ |
| 2 | ಶಿರಸ್ತೇದಾರರು | 1 | |
| 3 | ತೀರ್ಪು ಬರಹಗಾರರು | 1 | |
| 4 | ಪ್ರಥಮ ದರ್ಜೆ ಸಹಾಯಕರು | 1 | |
| 5 | ದ್ವಿತೀಯ ದರ್ಜೆ ಸಹಾಯಕರು | 1 | |
| 6 | ಬೆರಳಚ್ಚುಗಾರರು | 1 | ಹೊರಗುತ್ತಿಗೆ |
| 7 | ಅಟೆಂಡರ್ | 1 | |
| 8 | ಪ್ಯೂನ್ | 1 | |
| ಒಟ್ಟು | | 8 | |
| 3 ನ್ಯಾಯಾಲಯಗಳಿಗೆ 8 ಹುದ್ದೆಗಳಂತೆ ಒಟ್ಟು 24 ಹುದ್ದೆಗಳು | | | |

2. ಆದೇಶ ಸಂಖ್ಯೆ: ಲಾ 35 ಎಲ್‌ಸಿಇ 2018, ದಿನಾಂಕ: 31.07.2018 ರನ್ವಯ ಸ್ಥಾಪಿಸಲಾದ 3 ವಾಣಿಜ್ಯಾತ್ಮಕ ನ್ಯಾಯಾಲಯಗಳ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳನ್ನು ಸಿವಿಲ್ ಮತ್ತು ಸತ್ರ ನ್ಯಾಯಾಲಯಗಳು ಲೆಕ್ಕಶೀರ್ಷಿಕೆ: 2014-00-105-0-01 ರಲ್ಲಿ ಭರಿಸುವುದು.

ಪುಟ-4ಕ್ಕೆ
ಮುಂದುವರೆದಿದೆ..

3. ಈ ಆದೇಶವನ್ನು ಆರ್ಥಿಕ ಇಲಾಖೆಯು ಹಿಂಬರಹ ಸಂಖ್ಯೆ: ಆಇ 468 ವೆಚ್ಚ-10/2018, ದಿನಾಂಕ: 07.09.2018 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಹೆಚ್. ಬಿ. ಪ್ರಫುಲ್ಲವತಿ 11/9/18
(ಹೆಚ್. ಬಿ. ಪ್ರಫುಲ್ಲವತಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-1),
ಕಾನೂನು ಇಲಾಖೆ.

ಇವರಿಗೆ:

(1) ಪ್ರಧಾನ ಮಹಾಲೇಖಪಾಲರು (ಎ. ಮತ್ತು ಇ.)/(ಲೆಕ್ಕಪರಿಶೋಧನೆ-1)/(ಲೆಕ್ಕಪರಿಶೋಧನೆ-2), ಕರ್ನಾಟಕ, ಬೆಂಗಳೂರು-1
(2) ~~ರಿಜಿಸ್ಟ್ರಾರ್ ಜನರಲ್ ರವರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು-1~~
(3) ಪ್ರಧಾನ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು
(4) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ ಜಿಲ್ಲೆ, ಬಳ್ಳಾರಿ
(5) ಎಲ್ಲಾ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರುಗಳು
(6) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
(7) ಮಾನ್ಯ ಕಾನೂನು, ಸಂಸದೀಯ ವ್ಯವಹಾರ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಕಾಸ ಸೌಧ, ಬೆಂಗಳೂರು-1
(8) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ಕಾನೂನು ಇಲಾಖೆ, ವಿಧಾನ ಸೌಧ, ಬೆಂಗಳೂರು-1
(9) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-2 ಮತ್ತು 10), ವಿಧಾನ ಸೌಧ, ಬೆಂಗಳೂರು-1
(10) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.